'ಹೋಗೋಣಾ?' ಎಂದು ನನ್ನನ್ನು ನೋಡಿಕೊಂಡೇ ಅಮ್ಮ ಎಲ್ಲರೆದುರಿಗೆ ಹೇಳುವಾಗ ನಾನು ಶೆಂಬಾಯಿಅಪ್ಪತ್ತಾ ಪರಸ್ಪರ ನೋಡಿಕೊಳ್ಳುವೆವು. ಬಳುವಳಿ ನೆನಪಾಗುವುದು. ಮತ್ತೊಮ್ಮೆ ಅಲ್ಲಿಗೆ ಬರಬೇಕೆಂದುಕೊಳ್ಳುವೆನು. ಅಮ್ಮನ ಮನೆಯೂ ಅವರ ಮನೆಯೂ ಬಹಳ ದೂರವೇನೂ ಇಲ್ಲ. ಒಂದು ರಸ್ತೆಯನ್ನು ಹಾದು, ರಸ್ತೆಯಲ್ಲ ಕೇವಲ ಆರು ಮನೆಯನ್ನು ದಾಟಿ ತಿರುವಿನಲ್ಲಿ ಕಾಲಿಟ್ಟರೆ 'ಅಪ್ಪನ ಮನೆ'. ಆದರೆ ಬರಲು ಸಮಯ ದೊರಕದು. ನೆನಪಾಗುವುದಿಲ್ಲ. ಅಮ್ಮನ ಮನೆಯ ಬಳಗ ದೊಡ್ಡದು, ಸ್ನೇಹವೂ ಹಾಗೆಯೇ. ಆಟಗಳೂ ಕೆಲಸವೂ ಬಹಳ ಇರುವುದು. ಅದರಲ್ಲೂ ಜಾತ್ರೆಯ ಸಮಯ ಅದು ಎಂಬುದರಿಂದ ಬಹಳವೇ ಇರುವುದು. ದೊಡ್ಡಿಯನ್ನು ನೋಡುತ್ತಿರುವ ಮನೆ ದೊಡ್ಡಮ್ಮನ ಮನೆ. ಅಕ್ಕನ ಜತೆ ಹುಟ್ಟಿದ ಅಕ್ಕನ ಮನೆ—ಎಂಬುದರಿಂದ ಜಾತ್ರೆಯ ಗಲಾಟೆಗಳು ಬಹಳ ಇರುತ್ತಿದ್ದವು. ಬೇರೆಲ್ಲಿಗೂ ಹೋಗಬೇಕೆನಿಸುವುದಿಲ್ಲ. ಮಂದೆಯ ಬಳಿ ಬಂದು ದೇವರನ್ನು ನೋಡುವಾಗ ಶೆಂಬಾಯಿಅಪ್ಪತ್ತಾ ದೊಡ್ಡಮ್ಮನ ಮನೆಗೆ ಬರುವರು. ಅವರೊಂದಿಗೆ ಅವರ ಮನೆಗೆ ಬಂದ ನೆಂಟರ ಬಳಗವೂ ಇರುವುದರಿಂದ ಬಹಳ ಮಾತುಗಳಿರದು. ಒಮ್ಮೆ ಅವರೊಂದಿಗೆ ಹೋಗಿ ಮಂದೆಯಮ್ಮನನ್ನು ನಮಸ್ಕರಿಸಿ ಬಂದದ್ದುಂಟು. ಶೆಂಬಾಯಿಅಪ್ಪತ್ತಾ ನನಗೆ ವಿಭೂತಿಯನ್ನು, ಕುಂಕುಮವನ್ನು ಹಣೆಗಿಟ್ಟದ್ದು ನೆನಪಿದೆ. ಅಷ್ಟೇ.

ಅಪ್ಪತ್ತಾರೊಂದಿಗೆ ಒಮ್ಮೆ ಸಿನಿಮಾಗೆ ಹೋದದ್ದನ್ನ ಎಂದೂ ಮರೆಯಲಾಗದು. ಹತ್ತಿರದಲ್ಲಿರುವ ಸಿಂಗಂಪುಣರಿಯಲ್ಲಿ ಥಿಯೇಟರ್. ಅಮ್ಮ ಅಷ್ಟು ಸುಲಭದಲ್ಲಿ ಅನುಮತಿ ಕೊಡಲಿಲ್ಲ. ಇಷ್ಟಕ್ಕೂ ನೈಟ್ ಶೋ ಅಲ್ಲ. ಮಧ್ಯಾಹ್ನ ನೋಡುವ ಮ್ಯಾಟನಿ ಶೋ. ಸ್ಕೂಲ್ ಇಲ್ಲದ ಭಾನುವಾರವೇ. ಕೆಲಸವೂ ಏನೂ ಇರಲಿಲ್ಲ. ಹೇಗೆ ಈ ಮಾತು ಶುರುವಾಯಿತೆಂದು ತಿಳಿಯಲಿಲ್ಲ. 'ಹೋಗುತ್ತೇನೆ' ಎಂದು ಹಟ ಮಾಡಿದ ನೆನಪು. ಬೇರೆ ದಾರಿ ಇಲ್ಲದೇ ಅಮ್ಮನೂ ನನ್ನನ್ನು ಕಳುಹಿಸಿಕೊಟ್ಟದ್ದು ಆಶ್ಚರ್ಯ. ಶೆಂಬಾಯಿಅಪ್ಪತ್ತಾರೊಂದಿಗೆ ಬಸ್ಸಿನಲ್ಲಿ ಪ್ರಯಾಣ. ಹೊಸದಾಗಿ ಕಟ್ಟಿದ್ದ ರಾಜಾ ಥಿಯೇಟರಿನಲ್ಲಿ ಸಿನಿಮಾ ನೋಡಲು ಹೋಗುತ್ತಿದ್ದೇವೆ ಎಂಬ ಹೆಮ್ಮೆ. ಮಾರನೆಯ ದಿನ ಸ್ಕೂಲಿನಲ್ಲಿ ಮಿಕ್ಕ ಹುಡುಗರೊಂದಿಗೆ ಜಂಬ ಕೊಚ್ಚಿಕೊಳ್ಳಲು ಒಂದು ಅವಕಾಶ. 'ಯಾವ ಸಿನಿಮಾ?' ನೆನಪಿಲ್ಲ. ದೇವರ ಸಿನಿಮಾನೇ ಇರಬೇಕು. ಹಾಗಿದ್ದರೆ ಮಾತ್ರ ಅಮ್ಮ ಅನುಮತಿಸುವಳು ಎನ್ನುವುದರಿಂದ ಹೇಳುತ್ತೇನೆ. ಶೆಂಬಾಯಿಅಪ್ಪತ್ತಾ ಜೊತೆಗೆ ಹೋದದ್ದು ಮಾತ್ರವೇ ನೆನಪಿನಲ್ಲಿರುವುದು.

ಬಸ್ಸಿನಲ್ಲಿ ಸುಮಾರು ಜನ. ಒಂದೇ ಸೀಟು. ಅಪ್ಪತ್ತಾ ಕುಳಿತುಕೊಂಡು ನಾನು ನಿಂತುಕೊಳ್ಳಲು, ಅವರಿಗೆ ಮನಸ್ಸಾಗಲಿಲ್ಲ. ಮೂವರು ಕುಳಿತುಕೊಳ್ಳುವ ಸೀಟಿನಲ್ಲಿ ನನ್ನನ್ನೂ ಹತ್ತಿರ ಕೂರಿಸಿಕೊಂಡರು ಶೆಂಬಾಯಿಅಪ್ಪತ್ತಾ. ಬೀಳದಂತಿರಲು ನನ್ನ ಸೊಂಟವನ್ನು ಬಳಸಿ ಹಿಡಿದುಕೊಂಡರು. ಬಿಕ್ಕಟ್ಟು. ಜನ. ಇವೆಲ್ಲವನ್ನೂ ದಾಟಿ ಸ್ಯಾಂಡಲ್ ಪೌಡರ್, ಮಲ್ಲಿಗೆಯ ಹೂವಿನ ವಾಸನೆ, ಬೆವರು ಬೆರೆತ ಸೋಪು, ಪೆಟ್ಟಿಗೆಯಿಂದ ತೆಗೆದು ಉಟ್ಟು ಬಂದ ಹೊಸ ಸೀರೆಯ ನೆಫ್ತಾಲಿನ್ ಉಂಡೆಗಳ ವಾಸನೆ. ಒಟ್ಟಾಗಿ ಹೊರಟ ಆ ಪಯಣದಲ್ಲಿ ಕಂಡಕ್ಟರ್ ಬಂದು ಟಿಕೆಟ್ ಕೊಡುವಾಗ, ಹಣ ತೆಗೆದು ಕೊಡಲಾಗಲಿಲ್ಲ, ಶೆಂಬಾಯಿಅಪ್ಪತ್ತಾರಿಂದ. ಮೆಲ್ಲಗೆ ತನ್ನ ಕೈಚೀಲವನ್ನು ನನಗೆ ಕೊಟ್ಟು ಅದರಲ್ಲಿರುವ ಹಣವನ್ನು ತೆಗೆದು ಕೊಡಲು ಹೇಳಿದರು. ಮೃದುವಾಗಿದ್ದ, ನಂತರ ಅದು ವೆಲ್ವೆಟ್ ಎಂದು ತಿಳಿದುಕೊಂಡ ಆ ಪರ್ಸನ್ನು ತೆರೆದೆನು. ಯಾವುದೋ ಮಂತ್ರದ ಪೆಟ್ಟಿಗೆಯನ್ನು ತೆಗೆಯುವಂತೆ, ಕಟ್ಟು ಕಟ್ಟು ನೋಟುಗಳು... ಅದರಲ್ಲಿ ಒಂದು ಹತ್ತು ರೂಪಾಯಿಯನ್ನು ತೆಗೆದು ಕೊಡಲು ಹೇಳಿದರು ಅಪ್ಪತ್ತಾ. ಆ ಅಯಸ್ಕಾಂತದ ಕಣ್ಣುಗಳನ್ನು ಒಂದು ಪಕ್ಕಕ್ಕೆ ಹೊರಳಿಸಿ ನನ್ನನ್ನು ನೋಡುತ್ತ. ತೆಗೆದುಕೊಟ್ಟು ಟಿಕೆಟನ್ನು ಉಳಿದ